ಅಂತೆ. ಚೆನ್ನಾಗಿ ಮಾತಾಡ್ತರಂತೆ' ಅಂತ ಅವರ ಬಗ್ಗೆ ಪ್ರಚಾರ. ಎಲ್ಲಿ ಅವರು ಮಾತನಾಡಿದರೂ ಅಲ್ಲಿಗೆ ನಾನು ಹೋಗ್ತಿದ್ದೆ. ಅವರು ನನಗೆ ಕ್ಲಾಸ್ ತಗೋತಿರಲಿಲ್ಲ. ನಾನು ಪಿಸಿಎಂ, ಅವರದು ಜುವಾಲಜಿ. ಕಥೆಗಾರ ವೀರಭದ್ರ ನನಗೆ ಮೇಷ್ಟ್ರು. ಪರಶಿವಮೂರ್ತಿ ನಮಗೆ ಮೇಷ್ಟರು. ಕತೆಗಾರ್ತಿ ನೇಮಿಚಂದ್ರ ಅವರ ತಂದೆ ಗುಂಡಣ್ಣ ನಮ್ಮ ಹೆಡ್. ಒಮ್ಮೆ ವಿದ್ಯಾರ್ಥಿ ಕವನಸ್ಪರ್ಧೆಯಲ್ಲಿ ನನಗೆ ಬಹುಮಾನ ಬಂತು. ಪು.ತಿ. ನರಸಿಂಹಾಚಾರ್ ತೀರ್ಪುಗಾರರು. ಪು.ತಿ.ನ. ಎನ್ನುವ ಸಹಿ ನೋಡಿ ರೋಮಾಂಚನವಾಯ್ತು. ಆ ಪ್ರಶಸ್ತಿಪತ್ರವನ್ನು ಗುಂಡಣ್ಣನವರು ನಿಸಾರ್ ಅವರ ಕೈಯಿಂದ ನನಗೆ ಕೊಡಿಸಿದರು. 'ಪದ್ಯ ಬರೀತಿಯೇನಪ್ಪ. ತಗೊಂಡು ಬಾ ನೋಡ್ತೀನಿ' ಎಂದರು ನಿಸಾರ್. ಪದ್ಯ ತಗೊಂಡು ಹೋದಾಗ, ಓದಿ, 'ಚೆನ್ನಾಗಿದೆ, ಬರೀರಿ' ಎಂದು ಮೆಚ್ಚಿಕೊಂಡರು. ಹೀಗೆ ನಿಸಾರ್ ಅವರ ಪರಿಚಯವಾದದ್ದು. ನಾನು ನೋಡಿದ ಮೊಟ್ಟ ಮೊದಲ ಜೀವಂತ ಓಡಾಡುವ ಕವಿ ಅವರು. ಉಳಿದವರೆಲ್ಲ ಕಾಗದದಲ್ಲಿ ಇದ್ದವರೇ.

◆ **ಸಾಹಿತ್ಯದ ಹುಚ್ಚು ಹತ್ತಿಸಿಕೊಂಡಿದ್ದ ನೀವು ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜಿಗೆ ಬಂದುದು ಹೇಗೆ?**

ಎಂ.ಎ. ಮುಗಿದ ನಂತರ ಮತ್ತೆ ಮಲ್ಲಾಡಿಹಳ್ಳಿಗೆ ಹೋದೆ. ತೀರ್ಥಹಳ್ಳಿ, ಸಾಗರ, ಶಿವಮೊಗ್ಗಕ್ಕೆ ಹೋಗಿಬಂದೆ. ಎಲ್ಲೂ ಬೇರೆ ಕೆಲಸ ಸಿಗಲಿಲ್ಲ. ಇನ್ನೆಲ್ಲೂ ಕೆಲಸ ಸಿಗೊಲ್ಲ ಎಂದುಕೊಂಡಿದ್ದ ಸಂದರ್ಭದಲ್ಲಿ, ಒಂದು ದಿನ ಕಥೆಗಾರ ಈಶ್ವರಚಂದ್ರರಿಂದ 'ಸ್ಟಾರ್ಟ್ ಇಮ್ಮಿಡಿಯೇಟ್ಲಿ' ಎಂದು ಟೆಲಿಗ್ರಾಂ ಬಂತು. ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಒಂದು ಕೆಲಸ ಖಾಲಿ ಇದ್ದ ವಿಷಯ ಶಿವರುದ್ರಪ್ಪನವರ ಮೂಲಕ ಅ.ರಾ. ಮಿತ್ರರಿಗೆ, ಅವರ ಮೂಲಕ ಶೇಷನಾರಾಯಣರಿಗೆ, ಅವರಿಂದ ಈಶ್ವರಚಂದ್ರರಿಗೆ ತಿಳಿದು, ಕೊನೆಗೆ ನನಗೆ ಸಂದೇಶ ತಲುಪಿತ್ತು. ರಾತ್ರೋರಾತ್ರಿ ರೈಲು ಹಿಡಿದು ಬೆಂಗಳೂರಿಗೆ ಬಂದೆ. ಈಶ್ವರಚಂದ್ರರ ಮನೆ ಚಾಮರಾಜಪೇಟೇಲಿ ಉಮಾ ಟಾಕೀಸ್ ಹಿಂದೆ ಇತ್ತು. 'ಚಪ್ಪಲಿ ಹಾಕ್ಕಂಡು ಬಂದಿದ್ದೀಯಲ್ಲ, ಅಲ್ಲಿಗೆ ಶೂ ಹಾಕ್ಕೊಂಡು ಹೋಗಬೇಕು, ಇಂಗ್ಲಿಷ್‌ನಲ್ಲಿ ಮಾತನಾಡಬೇಕು' ಎಂದರು. ಫಜೀತಿ ಎನ್ನಿಸಿತು. ಬೆಳಗ್ಗೆ ಒಂಬತ್ತಕ್ಕೆ ಬಾಟಾ ಶೋರೂಂ ತೆರೆಯುವುದನ್ನು ಕಾದು ಶೂ ತಗೊಂಡಿದ್ದಾಯಿತು. ಹತ್ತು ಗಂಟೆಗೆ ಸಂದರ್ಶನ. ಹೊಸ ಶೂ ಕಚ್ಚುತ್ತಿತ್ತು. ಭರತನಾಟ್ಯದ ಭಂಗಿಯಲ್ಲಿ ಒಳಗೆ ಹೋದೆ. ಫಾದರ್ ಮೆನೆಜಿಸ್ ಹಾಗೂ ಅ.ರಾ. ಮಿತ್ರ ಸಂದರ್ಶಕರು. 'ಹಳಗನ್ನಡದ ಪಠ್ಯ ಓದಿ' ಎಂದು ಪುಸ್ತಕವೊಂದನ್ನು ಕೊಟ್ಟರು. ಪಂಪನ ವೃತ್ತವೊಂದನ್ನು ಓದಿದೆ. 'ಚೆನ್ನಾಗಿ ಓದ್ತೀರಿ' ಎಂದು ಮೆಚ್ಚಿಕೊಂಡರು. ಫಾದರ್ ಸುಮ್ಮನಿರದೆ, 'ಅದನ್ನು ಇಂಗ್ಲಿಷ್‌ನಲ್ಲಿ ಪರಿಚಯಿಸಿ' ಎಂದರು. ಪೀಕಲಾಟ ಶುರುವಾಯಿತು. ಒಂದೊಂದೇ ಪದಗಳನ್ನು ಜೋಡಿಸಿ ಮಾತನಾಡಿದೆ. 'ನೀವು ಪದ್ಯ ಬರೀತೀರಂತಲ್ಲ' ಎಂದರು. ಕವನಸಂಕಲನ ಮುಂದಿಟ್ಟೆ. 'ಒಂದು ಪದ್ಯ ಓದಿ' ಎಂದರು. 'ಜಾಲಿ ಮರ' ಎನ್ನುವ ಪದ್ಯ ಓದಿದೆ. ಅಷ್ಟೇ. ಅರ್ಧ ತಾಸಿನಲ್ಲಿ ನೇಮಕಾತಿ ಪತ್ರ ತಲುಪಿತು. ಫಾದರ್ ಸಹಿಯ ಆ ಪತ್ರ ನನ್ನ ಪಾಲಿಗೆ ಪ್ರೇಮಪತ್ರದಂತಿತ್ತು. 1973ರಲ್ಲಿ ಬೆಂಗಳೂರಿಗೆ ಬಂದಿದ್ದಾಯಿತು.

ಸೇಂಟ್ ಜೋಸೆಫ್ಸ್‌ನಲ್ಲಿ ಮೂವತ್ತು ವರ್ಷ ದುಡಿದು ನಿವೃತ್ತಿ ಪಡೆದೆ. ಬರವಣಿಗೆ ಮಾಡಲಿಕ್ಕೆ ಸಮಯ ಸಾಲದು ಎನ್ನಿಸುತ್ತಿತ್ತು. ನಮ್ಮದು ಕಾಲೇಜಿನೊಂದಿಗೆ ವಿಚಿತ್ರ ಸಂಬಂಧ. ಬೆಳಗ್ಗೆ 9ಕ್ಕೆ ಕಾಲೇಜಿಗೆ ಹೋದರೆ ಸಂಜೆ 7ಕ್ಕೇ ಮನೆಗೆ ಬರುತ್ತಿದ್ದುದು. ನಾಲ್ಕಕ್ಕೆ ಕಾಲೇಜು ಮುಗಿದರೂ ಹುಡುಗರೊಂದಿಗೆ ಆಟ, ಪಾಠ, ಚರ್ಚೆ ನಡೆಯುತ್ತಿತ್ತು. ಅಮಾನುಲ್ಲ ಎನ್ನುವ ಹಿಂದಿ ಮೇಷ್ಟ್ರಿದ್ದರು. ಅವರು ಭಾನುವಾರವೂ ಕಾಲೇಜಿಗೆ ಬರುತ್ತಿದ್ದರು. ಜ್ವರ ಬಂದರೂ, ರಜೆ